ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಇದು ಸರಿಯಿಲ್ಲ. ಇದನ್ನು ಪ್ರತಿಭಟನೆ ಮಾಡಿ, ಬಹಿಷ್ಕಾರ ಹಾಕುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ತಾವು ತೆಗೆದುಕೊಂಡ ಕ್ರಮ ಸರಿಯಾಗಿಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು, ಶ್ರೀ ಜೆ.ಸಿ. ಮಾಧುಸ್ವಾಮಿ ಯವರು ಹಾಗೂ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :– Walk out ಮಾಡುತ್ತೇವೆಂದು ಹೇಳಿದ ಮೇಲೆ ಹೋಗುತ್ತಾ ಇರಬೇಕು.

ಶ್ರೀ ಡಿ.ಆರ್. ಪಾಟೀಲ್ :– ತಾವು ಏನು ನೋಟ್ ಓದಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಸ್ವಲ್ಪ ಮಟ್ಟಿಗೆ ಅಮೆಂಡ್‌ಮೆಂಟ್ ಬಗ್ಗೆ ಕೇಳಿದ್ದಾರೆ. ಅದೆಲ್ಲವನ್ನು ಒಪ್ಪಿ ಓಟಿಂಗ್‌ಗೆ ಹಾಕಿಕೊಳ್ಳಿ.

ಶ್ರೀ ಶರಣಬಸಪ್ಪ ಬಾಪುಗೌಡ ದರ್ಶನಾಪುರ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಕಳೆದ ಸದನದಲ್ಲಿ ಕೆಲವೊಂದು clauses ಬಗ್ಗೆ ಅಮೆಂಡ್‌ಮೆಂಟ್ಸ್ ಕೊಟ್ಟಿದ್ದರು. ನಾವು ಅವರು ಕೊಟ್ಟಿದ್ದಂಥ clause No.8, clause No. 12, clause No. 13, clause No. 16,18 & 29 ಅನ್ನು ಸಂಪೂರ್ಣವಾಗಿ ಒಪ್ಪಿದ್ದೇವೆ. ನಿನ್ನೆ ದಿವಸ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸಿದ್ಧರಾಮಯ್ಯನವರು, ಮತ್ತು ತಾವೆಲ್ಲರೂ ಪ್ರಸ್ತಾಪ ಮಾಡಿದ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟ ವಿಷಯದ ಬಗ್ಗೆ ಸಹ ಮಾಡಿ ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ಅದು ಆದ ಮೇಲೆ licensing authority ಗೆ ಸಂಬಂಧಪಟ್ಟಂತೆ Agriculture Directing Market ಏನು Director ಹತ್ತಿರ ಇತ್ತು. ಅದನ್ನು Government ಕೊಡುವಂಥಾದ್ದಕ್ಕೂ ನಾವು ಒಪ್ಪಿದ್ದೇವೆ, ಮತ್ತೆ Revolving Fund ಇದು ಏನು Director Agriculture ಇತ್ತೋ ಅದನ್ನು Agriculture Marketing Board M.D. ಗೆ ಕೊಡುವಂಥಾದ್ದನ್ನು ಕೂಡ ಮಾಡಿದ್ದೇವೆ. Marketing Committee ಖರ್ಚು ಅದನ್ನು ಕೂಡ ತೆಗೆದಿದ್ದೇವೆ. ಇಷ್ಟೆಲ್ಲಾ ಅವರು ಕೊಟ್ಟಿರುವಂಥಾದ್ದನ್ನು ಸಂಪೂರ್ಣವಾಗಿ ಒಪ್ಪಿದ್ದೇವೆ. ಇದು ಬಹಳ ಅವಶ್ಯಕತೆ ಇದೆ.